# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 452 (370) |
| ಸದಸ್ಯರ ಹೆಸರು | ಡಾ: ತಳವಾರ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 19.02.2024. |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಹಿರೆಬಾಗೆವಾಡಿ ಗ್ರಾಮದ ಬಳಿ ನಿರ್ಮಾಣವಾಗುತ್ತಿರುವ ಹೊಸ ಕ್ಯಾಂಪಸ್‌ಗಾಗಿ ವಿಶ್ವವಿದ್ಯಾಲಯದಿಂದ ಎಷ್ಟು ಹಣ ಭರಿಸಲಾಗಿದೆ; | ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೆವಾಡಿ ಗ್ರಾಮದ ಬಳಿ ನಿರ್ಮಾಣ ವಾಗುತ್ತಿರುವ ಹೊಸ ಕ್ಯಾಂಪಸ್‌ಗಾಗಿ ಸದ್ಯ ವಿಶ್ವವಿದ್ಯಾಲಯದಿಂದ ರೂ.52.00ಕೋಟಿ ಹಣವನ್ನು ಭರಿಸಲಾಗಿದೆ. |
| ಆ) | ಅಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಸಂಖ್ಯೆ ಎಷ್ಟು ಮತ್ತು ಅಂದಾಜು ವೆಚ್ಚ ಎಷ್ಟು; | ನಿರ್ಮಾಣವಾಗುತ್ತಿರುವ ಮೊದಲ ಹಂತದ ಕಟ್ಟಡಗಳ ಸಂಖ್ಯೆ-10, ಅಂದಾಜು ವೆಚ್ಚ ರೂ.110.00ಕೋಟಿ. |
| ಇ) | ಕಟ್ಟಡ ನಿರ್ಮಾಣ ಯಾವ ಹಂತದಲ್ಲಿದೆ; | 1. ವಾಣಿಜ್ಯ ಶಾಸ್ತ್ರ ವಿಭಾಗ:-ನೆಲಮಹಡಿಯ ಆಂತರಿಕ ಪ್ಲಾಸ್ಟರಿಂಗ್ ಕೆಲಸ ಪ್ರಗತಿಯಲ್ಲಿರುತ್ತದೆ. ಮೊದಲನೆಯ ಮಹಡಿಯ ಸಿ.ಸಿ. ಬ್ಲಾಕ್‌ನಿಂದ ಗೋಡೆ ನಿರ್ಮಾಣ ಕೆಲಸ ಪೂರ್ಣಗೊಂಡಿದ್ದು, ಪ್ಲಾಸ್ಟರಿಂಗ್ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ. ಟೇರಸ್ ಮಹಡಿಯ ಸಿ.ಸಿ.ಬ್ಲಾಕ್ ನಿಂದ ಗೋಡೆ ನಿರ್ಮಾಣ ಕೆಲಸ ಪೂರ್ಣಗೊಂಡಿರುತ್ತದೆ. ಬಾಹ್ಯ ಪ್ಲಾಸ್ಟರಿಂಗ್ ಕೆಲಸ ಪೂರ್ಣಗೊಂಡಿರುತ್ತದೆ.<br>2. ಸಸ್ಯಶಾಸ್ತ್ರ ವಿಭಾಗ:- ನೆಲ ಮಹಡಿಯ ಸಿ.ಸಿ.ಬ್ಲಾಕ್ ನಿಂದ ಗೋಡೆ ನಿರ್ಮಾಣ ಕೆಲಸ ಪೂರ್ಣಗೊಂಡಿದ್ದು, ಪ್ಲಾಸ್ಟರಿಂಗ್ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ. ಟೇರೆಸ್ ಮಹಡಿಯ ಪ್ಯಾರಾಪಿಟ್ ಕೆಲಸ ಪೂರ್ಣಗೊಂಡಿರುತ್ತದೆ.<br>3. ಅರ್ಥಶಾಸ್ತ್ರ ವಿಭಾಗ:- ನೆಲ ಮಹಡಿಯ ಆಂತರಿಕ ಪ್ಲಾಸ್ಟರಿಂಗ್ ಕೆಲಸ ಪ್ರಗತಿಯಲ್ಲಿರುತ್ತದೆ. ಮೊದಲನೆಯ ಮಹಡಿಯ ಸಿ.ಸಿ.ಬ್ಲಾಕ್ ನಿಂದ ಗೋಡೆ ನಿರ್ಮಾಣ ಕೆಲಸ ಪ್ರಗತಿಯಲ್ಲಿರುತ್ತದೆ. ಟೇರೆಸ್ ಮಹಡಿಯ ಪ್ಯಾರಾಪಿಟ್ ಕೆಲಸ ಪೂರ್ಣಗೊಂಡಿರುತ್ತದೆ.<br>4. ಸಮಾಜಕಾರ್ಯ ವಿಭಾಗ:- ನೆಲಮಹಡಿಯ ಸಿ.ಸಿ.ಬ್ಲಾಕ್ ನಿಂದ ಗೋಡೆ ನಿರ್ಮಾಣ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ. ಮೊದಲನೆಯ ಮಹಡಿಯ ಎಕ್ಸ್‌ಪಾನ್ಸನ್-01ರಲ್ಲಿ ಸ್ಲಾಬ್ ರಿಇನ್‌ಫೋರ್ಸ್‌ಮೆಂಟ್ ಹಾಗೂ ಎಕ್ಸ್‌ಪಾನ್ಸಸನ್-02ರಲ್ಲಿ ಶಟರಿಂಗ್ ಕೆಲಸ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | 5. ರಸಾಯನಶಾಸ್ತ್ರ ವಿಭಾಗ:- ಎಕ್ಸ್‌ಪಾನ್ಸಸನ್-01ರಲ್ಲಿ ನೆಲಮಹಡಿಯ ಮೇಲ್ಛಾವಣಿಯ ಸ್ಲಾಬ್ ಶಟರಿಂಗ್ ಪೂರ್ಣಗೊಂಡಿರುತ್ತದೆ. ಎಕ್ಸ್‌ಪಾನ್ಸನ್-02ರಲ್ಲಿ ಪ್ಲಿಂತ್ ಬೀಮ್ ಕೆಲಸ ಪ್ರಗತಿಯಲ್ಲಿರುತ್ತದೆ. ಎಕ್ಸ್‌ಪಾನ್ಸನ್-03ರಲ್ಲಿ ಪ್ಲಿಂತ್ ಬೀಮ್ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ.<br>6. ಆಡಳಿತ ವಿಭಾಗ:- ಬೇಸ್‌ಮೆಂಟ್ ಮಹಡಿಯ ಮೇಲ್ಛಾವಣಿಯ ಸ್ಲಾಬ್ ಶಟರಿಂಗ್ ಕೆಲಸ ಪ್ರಗತಿಯಲ್ಲಿರುತ್ತದೆ.<br>7. ಎಂಬಿಎ ವಿಭಾಗ:- ಮೊದಲನೆಯ ಮಹಡಿಯ ಸಿ.ಸಿ.ಬ್ಲಾಕ್ ನಿಂದ ಗೋಡೆ ನಿರ್ಮಾಣ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ, ಮೊದಲನೆ ಮಹಡಿಯ ಎಕ್ಸ್‌ಪಾನ್ಸನ್-01ರಲ್ಲಿ ಸ್ಲಾಬ್ ಕಾಂಕ್ರೀಟ್ ಪೂರ್ಣಗೊಂಡಿರುತ್ತದೆ ಹಾಗೂ ಎಕ್ಸ್‌ಪಾನ್ಸನ್-02ರಲ್ಲಿ ರಿಇನ್‌ಫೋರ್ಸ್ಮೆಂಟ್ ಕೆಲಸ ಪ್ರಗತಿಯಲ್ಲಿರುತ್ತದೆ.<br>8. ಗ್ರಂಥಾಲಯ:- ಬೇಸ್ ಮೆಂಟ್ ಮಹಡಿಯ ಪ್ಲಿಂತ್ ಕೆಳಗಿನ ಮಣ್ಣನ್ನು ಭರ್ತಿ ಮಾಡುವ ಕೆಲಸ ಪ್ರಗತಿಯಲ್ಲಿರುತ್ತದೆ.<br>9. ಪರೀಕ್ಷಾ ವಿಭಾಗ:- ಬೇಸ್‌ಮೆಂಟ್ ಮಹಡಿಯ ಪ್ಲಿಂತ್ ಬೀಮ್ ಕೆಲಸ ಪ್ರಗತಿಯಲ್ಲಿರುತ್ತದೆ.<br>10. ಸಭಾಂಗಣ:- ಅನುಮೋದಿತ ನಕ್ಷೆಗಳಿಗಾಗಿ ನಿರೀಕ್ಷಿಸಲಾಗುತ್ತದೆ. |
| ಈ) | ಕಟ್ಟಡಗಳ ನಿರ್ಮಾಣ ವಿಳಂಬವಾಗುತ್ತಿರಲು ಕಾರಣಗಳೇನು? | ನಿರ್ಮಾಣ ಕಾಮಗಾರಿ ಸ್ಥಳದಲ್ಲಿದ್ದ ಸುಮಾರು 700 ಗಿಡಗಳನ್ನು ನಿಯಮಾನುಸಾರ ಕಟಾವು ಮಾಡಲು, ಸಂಪರ್ಕ ರಸ್ತೆ ಹಾಗೂ ವಿದ್ಯುತ್ ಸಂಪರ್ಕ ಇಲ್ಲದೇ ಇರುವುದು, 2022 ಮತ್ತು 2023ರ ಸಾಲಿನ ಮಳೆಗಾಲದ ಅವಧಿಯಲ್ಲಿ ಕಾಮಗಾರಿಯ ಸ್ಥಳಕ್ಕೆ ಸಾಮಗ್ರಿಗಳನ್ನು ಸಾಗಿಸಲು ಅಡಚಣೆಯಿಂದಾಗಿ ಹಾಗೂ ಕಾಮಗಾರಿಯ ನಕ್ಷೆಗಳಲ್ಲಿ ಕೆಲವೊಂದು ಮಾರ್ಪಡುಗಳನ್ನು ಮಾಡಲು ಸೂಚಿಸಿದರನ್ವಯ ಕಟ್ಟಡಗಳ ನಿರ್ಮಾಣ ಕಾಮಗಾರಿ ವಿಳಂಬವಾಗಿರುತ್ತದೆ. |

ಕಡತ ಸಂಖ್ಯೆ: ಇಡಿ 40 ಹೆಚ್‌ಪಿಯು 2024)

(ಡಾ. ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು.